ಕಾಡಿಗೆ ಕಣ್ಣು

ಕಲೀಮ್ ಉಲ್ಲಾ



# ಹಾವಿನ ರೋಷ ಒಂದೆರಡು ನಿಮಿಷ

ಸುಲಲಿತವಾಗಿ ಎಲ್ಲಾ ದಿಕ್ಕುಗಳಲ್ಲೂ ಕ್ಯಾಮೆರಾವನ್ನು ಪಟಪಟ ತಿರುಗಿಸಿ ಪಟ ತೆಗೆಯಲು ಅನೇಕ ಸಲ ಟ್ರೈಪ್ಯಾಡಿನಲ್ಲಿ ಸಾಧ್ಯವಾಗುವುದಿಲ್ಲ. ಆಗ ಕ್ಯಾಮೆರಾ ಕೈಲಿದ್ದರೆ ಯಾವ ಭವಬಂಧನಗಳೂ ಅದಕ್ಕೆ ಲಗತ್ತಾಗದಿದ್ದರೆ ಉತ್ತಮ. ಸಲೀಸಾಗಿ ಎತ್ತ ಬೇಕಾದರೂ ಕ್ಯಾಮೆರಾ ಮೂತಿ ತಿರುಗಿಸಬಹುದು.



ಒಮ್ಮೊಮ್ಮೆ ಹೇಗೆಲ್ಲಾ ಆಗುತ್ತೆ ನೋಡಿ. ನಾವು ಕಡೆಗಣಿಸಿದ್ದನ್ನೇ ಕೊನೆಗೆ ಕಣ್ಣಿಗೊತ್ತಿಕೊಳ್ಳುವ ಸಮಯ ಬಂದು ಬಿಡುತ್ತೆ. ಬೇರೆ ಸಮಯದಲ್ಲಿ ನಾವು ಇದು ಅಷ್ಟೇನು ಮುಖ್ಯವಲ್ಲದ ಪಕ್ಷಿ ಎಂದೇ ಕಡೆಗಣಿಸಿದ್ದೆವು. ಆದರೀಗ ಇದೇ ಕರಿ ಕೆಂಬರಲು ಹಕ್ಕಿಯನ್ನು ಮುತುವರ್ಜಿಯಿಂದ ಬೆನ್ನಟ್ಟುವ ಅನಿವಾರ್ಯತೆಯಲ್ಲಿ ನಾವು ಸಿಲುಕಿದ್ದೇವೆ. ಇದಕ್ಕಾಗಿ ಮೂರು ದಿನಗಳ ಕಾಲ ಇಲ್ಲಿ ಬೀಡು ಬಿಟ್ಟಿದ್ದೇವೆ. ಸ್ಥಳೀಯ ಮೀನುಗಾರರು ತಮ್ಮ ಮರದ ದೋಣಿಯಲ್ಲಿ ನಮ್ಮನ್ನು ಕೂರಿಸಿಕೊಂಡು ಕೆಸರು ನೀರಿನ ಈ ಜಾಗೆಯಲ್ಲಿ ಓಡಾಡಿಸಲಿದ್ದಾರೆ.

ಕರಿ ಕೆಂಬರಲ ಮುಸುಡಿ ಎಲ್ಲಿ ಕಾಣುವುದೋ ಅಲ್ಲಿಗೆ ಹೋಗಿ ನಿಂತು ಗಂಟೆಗಟ್ಟಲೆ ಅದರ ವಹಿವಾಟನ್ನು ಸೂಕ್ಷ್ಮವಾಗಿ ನೋಡತೊಡಗಿದೆವು. ನಮ್ಮಂತೆಯೇ ದೂರದ ಬಂಗಾಲದಿಂದ ಆಸೆ ಹೊತ್ತು ಬಂದ ಛಾಯಾಚಿತ್ರಗ್ರಾಹಕರು ಅಲ್ಲಿದ್ದರು. ಇಷ್ಟೊಂದು ತದೇಕಚಿತ್ತದಿಂದ ಈ ಹಕ್ಕಿಯ ಚಟುವಟಿಕೆಗಳನ್ನು ಗಮನಿಸಲು ಮುಖ್ಯ ಕಾರಣವೊಂದಿತ್ತು. ಅದೆಲ್ಲಾ ಮುಂದೆ ತಿಳಿಯುತ್ತದೆ. ಸುಖಾಸುಮ್ಮನೆ ಹಾಗೆಲ್ಲಾ ಸಮಯ ಪೋಲು ಮಾಡುವ ಗಿರಾಕಿಗಳೂ ನಾವಲ್ಲ. ನಾವು ಹೇಗಾದರೂ ಮಾಡಿ ಕಪ್ಪು ತಲೆಯ, ಬಿಳಿ ದೇಹದ ಈ ಹಕ್ಕಿಯ ಕಲಾತ್ಮಕ ದಾಳಿಯ ವೈಖರಿಯನ್ನು ಚಿತ್ರಿಸಬೇಕಿತ್ತು.

ಇಲ್ಲಿ ನಮಗಿದ್ದ ಅತಿ ದೊಡ್ಡ ತೊಂದರೆ ಎಂದರೆ ಹೊಯ್ದಾಡುವ ದೋಣಿಯಲ್ಲಿ ಕೂತು ಅದರ ಚಿತ್ರ ತೆಗೆಯುವುದಾಗಿತ್ತು. ಐನೂರು ಆರುನೂರು ಎಂ.ಎಂ.ನ ಮಣಭಾರದ ಲೆನ್ಸ್‌ಗಳ ಕೈಯಲ್ಲಿ ಹೊತ್ತು ಹಿಡಿಯುವುದು ತೀರಾ ಸುಸ್ತು ಎನಿಸುತ್ತಿತ್ತು.